ಮಗಧ. ವೈಶಾಲಿ, ಕೌಶಾಂಬಿ ಮುಂತಾದ ನಗರಗಳಲ್ಲೆಲ್ಲಾ ತಮ್ಮ ಪ್ರವಚನದಿಂದ ಜನರನ್ನು ಸೆಳೆಯುತ್ತಿದ್ದ ತಥಾಗತರ ಖ್ಯಾತಿ ದಿನೇ ದಿನೇ ವೃದ್ಧಿಸತೊಡಗಿ ಕಪಿಲವಸ್ತುವಿಗೂ ಈ ವಿಷಯ ತಿಳಿದಾಗ ಒಂದೆಡೆ ಶುದ್ಧೋದನ ಮಹಾರಾಜರು ಸಂತಸಪಟ್ಟರೆ ಯಶೋಧರೆಗೆ ದುಃಖ ತಡೆಯಲಾಗಲಿಲ್ಲ. ಇಷ್ಟು ದಿವಸ ಮಗನನ್ನು ಸಾಕಿ ಸಲಹಿ ಎಲ್ಲ ಕಷ್ಟ ಕಾರ್ಪಣ್ಯಗಳನ್ನು ಮರೆಯುತ್ತಾ ಬಂದವಳಿಗೆ ಧುತ್ತೆಂದು ಗೌತಮರ ಆಗಮನದ ವಿಚಾರದಿಂದ ಎದೆ ನಡುಗಿದಂತಾಯಿತು. ಸಖಿ ಅಂಬಿಕೆ ಹೇಳಿದ ಮಾತುಗಳು ಮರ್ಮಾಘಾತಕವಾಗಿತ್ತು. ತಥಾಗತರು ಬಂದ ನಂತರ ಮಗ ರಾಹುಲನನ್ನು ಜೊತೆಯಲ್ಲಿ ಕರೆದೊಯ್ಯುತ್ತಾರೆಂಬ ಗೂಢಾಚಾರರ ಮಾತುಗಳನ್ನು ಅಂಬಿಕೆ ಮಹಾರಾಣಿಗೆ ತಿಳಿಸಿದಾಗ ಎದೆಬಡಿತ ಜಾಸ್ತಿಯಾಗಿತ್ತು. ಕಣ್ಣ ರೆಪ್ಪೆಯೊಳಗಿಟ್ಟು ಮುಚ್ಚಟೆಯಿಂದ ಏಳು ವರ್ಷಗಳಿಂದ ಬೆಳೆಸಿದ ಮಗುವನ್ನು ತೊರೆಯುವುದು ಅಷ್ಟೊಂದು ಸುಲಭದ ಮಾತಾಗಿರಲಿಲ್ಲ.

ಕೈಯಿಂದ ಮಗುವನ್ನು ಬಳಸಿ ಮಲಗಿದೊಡನೆ ತಾಯ ಸುಖ ಸ್ಪರ್ಶಕ್ಕೆ ಸಂತುಷ್ಟನಾಗಿ ಮಲಗಿ ನಿದ್ರಿಸಿ ಬಿಡುತ್ತಿದ್ದವನು, ಮಲಗಿದ್ದಾನಲ್ಲ ಎಂದು ಎಡಕ್ಕೆ ಹೊರಳಿದರೆ ಸಾಕು ಕಿಟಾರನೆ ಕಿರುಚಿ ನಿದ್ರೆಯಿಂದೆದ್ದು ಬಿಡುತ್ತಿದ್ದ ಮಗುವನ್ನು, ತೊಟ್ಟಿಲ ಮೇಲ್ಭಾಗಕ್ಕೆ ಕಟ್ಟಿದ ಆಟದ ಸಾಮಾನುಗಳನ್ನು ಕಾಲಿನಿಂದ ಒದೆದು ಮುಖವರಳಿಸಿ ನಗುತ್ತಿದ್ದ ಮಗುವನ್ನು, ಹೊರಳಿ ಎದೆಭಾಗದಿಂದ ಈಜಿ ಮುಂದೆ ಸರಿಯುತ್ತಿದ್ದವ ಎದ್ದು ನಿಂತು ತಪ್ಪುಗಾಲಿಟ್ಟು ಎದ್ದು ಬಿದ್ದು ನಡೆಯುತ್ತಿದ್ದವನನ್ನು, ತಾತ, ಶುದ್ಧೋದನರ ತೊಡೆ ಏರಿ, ಹೆಗಲೇರಿ ಆಟವಾಡುತ್ತಾ, ವಿದ್ಯೆ ಕಲಿಸಲು ಬಂದ ಗುರುಗಳಿಗೆ ವಿಚಿತ್ರವಾದ ಪ್ರಶ್ನೆಗಳನ್ನು ಕೇಳಿ ತಲೆಚಿಟ್ಟು ಹಿಡಿಸುತ್ತಿದ್ದವನನ್ನು ಬಿಟ್ಟಿರಲಾರದ ತಾಯ ಹೃದಯ ಒಂದೊಂದು ಘಳಿಗೆ ಕಳೆದು ಹೋದಂತೆಲ್ಲ ಎದೆ ಬಡಿತವೂ ವೇಗವಾಗಿ ಹೊಡೆದು ಕೊಳ್ಳತೊಡಗಿತು. ಏಳು ವರ್ಷಗಳಿಂದ ಮಡುಗಟ್ಟಿದ್ದ ದುಃಖ ಹನಿಯಾಗಿ ಕಣ್ಣಿಂದ ಹರಿಯ ತೊಡಗಿತು.

ಸೀತೆ, ಸಾವಿತ್ರಿ, ದಮಯಂತಿ, ಚಂದ್ರಮತಿಯವರಂತಾಗಬೇಕೆಂದು ನಿಂತ ನಿಲುವಿನಲ್ಲಿ ತೊರೆದು ಹೋದರೆ, ಹೋಗುವಾಗ ತಿಳಿಸಿದರೇನು ಕಾರಣವನಾದರೂ? ಹೊದ್ದಿದ್ದ ಹಚ್ಚಡವ ಮಗು ಮತ್ತು ನನ್ನ ಮೈಮೇಲೆಳೆದು ಹೋದರಲ್ಲ. ಅಂದು ಯಾವ ರಾಜ ಕಾರ್ಯ ಕಾರ್ಗತ್ತಲಿನಲ್ಲಿ ಕರೆದಿತ್ತು ಇವರನ್ನು. ಬಿಸುಟು ಹೋದ ವಸ್ತುವಿನಂತಾದ ಅರ್ಧಾಂಗಿಯ ಅಗತ್ಯಕ್ಕಿಂತ ಕುವರನು ಇಂದು ಬೇಕೆನಿಸಿದನೆ? ಇಡೀ ದಿವಸ ಬರಿ ಪ್ರಶ್ನೆಗಳೇ ಯಶೋಧರೆಯ ಹೃದಯವನ್ನು ಹಿಂಡಿ ಹಿಪ್ಪೆ ಮಾಡತೊಡಗಿದವು.

ಮೊಲೆ ಚೀಪುತ್ತ ಮಲಗಿದ್ದ ಹಾಲುಗಲ್ಲದ ಮಗುವನ್ನು ನೋಡಿಯಾದರೂ ಇವರ ಹೃದಯ ಕರಗಲಿಲ್ಲವೇ? ಹೊಕ್ಕಳ ಬಳ್ಳಿ ಕಡಿದುಕೊಂಡು ಬಂದು ನಸುನಗುತ್ತ ಮಲಗಿದ್ದ ಮುದ್ದು ಚಂದಿರನ ಮುಖ ನೋಡಿದ ಮೇಲೂ ಮಗುವಿನ ಮೇಲಿನ ಪ್ರೀತಿ ಇವರನ್ನು ತಡೆಯಲಿಲ್ಲವೇ? ಕಣ್ಣಲ್ಲಿ ಕಣ್ಣಿಟ್ಟು, ಬಿದ್ದರೆ ಹಲುಬುತ್ತ, ಎದ್ದರೆ ಎದೆಗಾನಿಸಿ ಸಂತೈಸುತ್ತ, ಇವರು ಬಿಸುಟು ಹೋದ ಸುಖವ ಮಗುವಿನಿಂದ ತುಂಬಿ ಕೊಳ್ಳುತ್ತ ಏಳು ವರ್ಷಗಳು ಕಾಪಿಟ್ಟ ಕುವರನ ಕೊಂಡೊಯ್ಯುವ ಸ್ವಾತಂತ್ರ್ಯವ ಇವರಿಗೆ ಕೊಟ್ಟವರಾರು?

ಅವರಿಲ್ಲದುದನ್ನೆ ನೆನೆಯುತ್ತಲೇ ನೊಂದದ್ದೇನು, ಬೆಂದದ್ದೇನು. ಈ ನೋವು ಬೇನೆಗಳು ಮನಸ್ಸನ್ನು ಆಕ್ರಮಿಸಿಕೊಂಡವು. ನಂತರ ಉದ್ಯಾನವನ, ನಗರ, ಭೂಮಿ, ಆಕಾಶಗಳನ್ನೆಲ್ಲ ಆಕ್ರಮಿಸಿಕೊಂಡದ್ದನ್ನು ಯಾರಿಗೆ ತಾನೆ ಹೇಳಲಿ? ಕೇಳಿಸಿಕೊಳ್ಳಲಿದ್ದ ಸಖಿ ಅಂಬಿಕೆಯಾದರೂ ಏನು ನುಡಿದಾಳು. ನನ್ನೊಳಗೆ ಬೆಳೆದ ಬೇಗುದಿ ಎದೆಯಲ್ಲಿ ಕೋಟೆ ಕಟ್ಟಿ ಅವರು ದೂರವಾಗೆ ಉಳಿದು ಹೋದರಲ್ಲ.

ಏಳು ವರ್ಷಗಳ ನಂತರ ಬರುತ್ತಿದ್ದಾರೆಂದು ತಿಳಿದ ತಕ್ಷಣ ಕಪಿಲ ವಸ್ತುವು ಸಿಂಗಾರಗೊಂಡರೂ ನನ್ನ ಮನಸ್ಸು ಸಿಂಗಾರಗೊಳ್ಳಲೇ ಇಲ್ಲ. ಇಡೀ ನಗರವೇ ದೀಪಗಳಿಂದ ಬೆಳಗುತ್ತಿದ್ದರೂ ಮನಸಿನಲ್ಲಿ ಬೆಳಕು ಮೂಡಲೇ ಇಲ್ಲ. ಸುಶ್ರಾವ್ಯ ಸಂಗೀತ ಅಲೆ ಅಲೆಯಾಗಿ ಅರಮನೆಯವರೆಗೆ ಹಬ್ಬಿ ಬಂದರೂ ಮನಸ್ಸು ಅರಳಿಕೊಳ್ಳಲೇ ಇಲ್ಲ. ತಥಾಗತರನ್ನು ಸ್ವಾಗತಿಸಲು ಸಡಗರಗೊಂಡಿದ್ದ ಸುವಾಸಿನಿಯರ ಕೈಬಳೆ, ಕಾಲಂದುಗೆಗಳ ಸದ್ದು ಕಿವಿಗೆ ಬೀಳುತ್ತಿದ್ದರೂ ನನ್ನ ಕೈಬಳೆ, ಕಾಲ್ಗೆಜ್ಜೆಗಳೇಕೆ ಸ್ತಬ್ಧವಾದವೊ. ಆರತಿ ಎತ್ತಲಿರುವ ಸುಮಂಗಲೆಯರ ಹಾಡು ಎಷ್ಟೊಂದು ಮಧುರವಾಗಿದೆ ದೇವಿ ಎಂದು ಸಖಿ ಅಂಬಿಕೆ ಹೇಳಿದರೂ ಅದೇಕೊ ನನ್ನ ಮನಸ್ಸು ಹಾಡಿಗೆ ಮುದಗೊಳ್ಳಲೇ ಇಲ್ಲ.

ಸೂರ್ಯಮಂಡಲದಿಂದ ಹೊರಡುವ ಹೊನ್ನಕಿರಣಗಳಂತೆ, ಚಂದ್ರನ ತಂಪು ಬೆಳಕಿನಲ್ಲಿ ಸೂಸುವ ಸ್ನಿಗ್ಧ, ಮೃದು, ಬೆಳಕಿನ ಕಾಂತಿಯಂತೆ ಲೋಕಕ್ಕೆ ಒಳಿತನ್ನು ಸಾರಲು ಹೊರಟು ಶಾಂತಿಯೇ ಮೈವೆತ್ತ ಕೋಮಲ ಮುಖ ಮಂಡಲದಂತೆ ಕಂಗೊಳಿಸುತ್ತಿರುವ ರಾಜಪುತ್ರರು ಅಲ್ಲ ಅಲ್ಲ ಮಹಾರಾಣಿಯವರೇ, ತಥಾಗತರು ಬರುತ್ತಿದ್ದಾರಂತೆ ಎಂದು ಅಂಬಿಕೆ ಹೊಗಳುವುದನ್ನು ನೋಡಿದರೆ ನನಗೇಕೆ ಆ ಭಾವ ಹೃದಯದಲ್ಲಿ ಹುಟ್ಟಲು ಇನ್ನೂ ಶ್ರಮಪಡುತ್ತಿದೆ ಎನಿಸುತ್ತಿದೆ.

ದೇಹ, ಉಸಿರು, ಮನಸ್ಸು ಎಲ್ಲವೂ ಒಂದಾಗಿ ಹೋಗಿದ್ದು ನನ್ನ ಬಾಳಿನಲ್ಲಿ ಅರ್ಧಭಾಗವಾಗಿ ಬಂದು 'ಉಸಿರಿಗೆ ಉಸಿರಿಕ್ಕಿದೆ, ಮನಸ್ಸಿಗೆ ಮನ ಬೆಸೆದೆ, ದೇಹಕ್ಕೆ ದೇಹ ಕೂಡಿದೆಯಲ್ಲ ಯಶೋಧರೆ' ಎಂದು ಹೊಗಳುತ್ತಿದ್ದವರು ಇದ್ದಕ್ಕಿದ್ದಂತೆ ದೇಹವನ್ನೇ ಅರ್ಧ ಕಡಿದುಕೊಂಡು ಹೊರಟು ಹೋದವರನ್ನು ನೋಡಲೇ ಬಾರದೆಂದು ನಿರ್ಧರಿಸಿದ್ದರೂ ಅಂಬಿಕೆಯ ಒತ್ತಾಯಕ್ಕೆ ನೋಡಲೇಬೇಕಾಯಿತು.

ಮನಸಿನಲ್ಲಿ ಎದ್ದ ಪ್ರಶ್ನೆಗಳಿಗೆಲ್ಲ ಇಂದು ಉತ್ತರ ಹುಡುಕಿಕೊಳ್ಳಬೇಕೆಂದು ತಾನೆ ನಿರ್ಧಾರಕ್ಕೆ ಬಂದದ್ದು. ಅಂಬಿಕೆ ಹೋಗಿ ತಥಾಗತರನ್ನು ನೋಡಿ 'ಬೆಂದು ಬಸವಳಿದಿದ್ದಾರೆ ಮಹಾರಾಣಿಯವರು, ಬಂದು ನೋಡಬಹುದೇ' ಎಂದಾಗ 'ಅದಕ್ಕೆ ಏನು ಅಡ್ಡಿ ಬರಲಿ, ಬಂದು ನೋಡುವುದು ತಪ್ಪಿಲ್ಲವೆಂದರಂತೆ' ಆದರೆ ಬರಹೇಳು ಎನಿಸಿಲ್ಲಿಲ್ಲವಲ್ಲ ಎಂದು ಮನಸ್ಸು ಕೊರಗಿದರೂ ಎದೆಯಾಳದಲ್ಲಿ ಪ್ರಶ್ನೆ, ಪ್ರಶ್ನೆಯಾಗಿ ಜೀವನ ಪೂರ್ತಿ ದಹಿಸಬಾರದೆಂದು ತಾನೆ ನಿರ್ಧರಿಸಿಕೊಂಡದ್ದು.

ವಜ್ರವೈಢೂರ್ಯ ಖಚಿತ ಸಿಂಹಾಸನವ ತೊರೆದು ಯಃಕಶ್ಚಿತ್ ಬಿದಿರಿನಿಂದ ಹೆಣೆದ ಸುಂದರ ಪೀಠದ ಮೇಲೆ ಗಂಭೀರವದನನಾಗಿ, ಶಾಂತ ಕಡಲಿನಂತೆ ವಿರಾಜಮಾನರಾಗಿದ್ದ ತಥಾಗತರ ಮುಖವನ್ನು ದಿಟ್ಟಿಸಿ ನೋಡುತ್ತಿದ್ದಂತೆ ನನ್ನೊಳಗೆ ಎದ್ದ ಪ್ರಶ್ನೆಗಳೆಲ್ಲ ಗಾಳಿಗೆ ಹಾರಿ ಹೋದಂತೆನಿಸಿ ಬಿಟ್ಟಿತಲ್ಲ ಏಕೆ? ಬೆಳಗುತ್ತಿದ್ದ ದುಂಡು ಮುಖದಲ್ಲಿ ಶಾಂತಿ ಸೂಸುವ ಕಣ್ಣುಗಳು, ಮುಚ್ಚಿದ ತುಟಿಗಳಲ್ಲೂ ಮೂಡುತ್ತಿದ್ದ ಮಂದಹಾಸ, ಹರಡಿದ್ದ ಮುಖದಲ್ಲಿನ ಶಾಂತಭಾವ ನೋಡಿದವರೆಲ್ಲರ ಮನಸ್ಸಿಗೂ ನೆಮ್ಮದಿ ತರುವಂತಹ ತಲೆಯ ಹಿಂದೆ ಮೂಡಿದ್ದ ತಂಪು ಬೆಳಕಿನ ಪ್ರಭಾವಳಿ ಇವುಗಳನ್ನು ನೋಡುತ್ತಿದ್ದಂತೆ ಪ್ರಶ್ನೆಗಳಿಗೆಲ್ಲಾ ಉತ್ತರ ಸಿಕ್ಕೇಬಿಟ್ಟಿತೆಂದು ಮನಸ್ಸಿನಲ್ಲಿ ಮೂಡಿದ ಶಾಂತಭಾವದಲ್ಲಿ ಪ್ರಶ್ನೆಗಳು ನಿಶ್ಶಕ್ತವಾದಂತೆನಿಸತೊಡಗಿತು. ಆದರೂ ಸಾವರಿಸಿಕೊಂಡ ಯಶೋಧರೆ ಬಗ್ಗಿ ನಮಸ್ಕರಿಸಿ ಎಡದ ಕೈಯಿಂದ ಬಲ ಪಾದವನ್ನು, ಬಲದ ಕೈಯಿಂದ ಎಡದ ಪಾದವನ್ನು ಸ್ಪರ್ಶಿಸಿದಾಗ ಮಿಂಚು ಹೊಡೆದಂತಾಯ್ತು. ದಿಗ್ಗನೆದ್ದ ಯಶೋಧರೆಗೆ ಎಲ್ಲಿಲ್ಲದ ಆವೇಶ ಬಂದು ತಥಾಗತರ ಪಾದಗಳನ್ನು ದಿಟ್ಟಿಸುತ್ತ ನಿಂತಳು.

ಏನೋ ಕೇಳಬೇಕೆಂದು ಬಂದಿರುವಿರಲ್ಲ ಕೇಳಿ ಎಂದಾಗ, ಏನ ಕೇಳಲಿ? ನನ್ನಂತೆ ನೊಂದ ನೂರಾರು ಜೀವಿಗಳಿಗೆ ಸಮಾಧಾನಪಡಿಸುತ್ತೇನೆಂದು ಹೊರಟ ನಿಮಗೆ ನನ್ನ ನೋವು ಕಾಣದಾಯಿತೆ? ನನ್ನ ಮನಸಿನ ಕೂಗು ಕೇಳದಾಯಿತೆ? ನಿದ್ರೆಯಲಿ ಕನಸು ಕಾಣುತ್ತ ಮಲಗಿದ್ದ ಕಂದನ ಮುಖ ಕೂಡಾ ನಿಮ್ಮ ನಿರ್ಧಾರವನ್ನು ಬದಲಿಸದಾಯಿತೆ? ನನ್ನ ಮನಸಿನ ಕೂಗು ಕೇಳದಾಯಿತೆ? ಇರುವ ಮನೆಯನು ಸುಟ್ಟು ಊರ ಬೆಳಗುವ ತುರ್ತು ನಿಮ್ಮಲ್ಲಿ ಉದ್ಭವಿಸಿದ್ದಾದರೂ ಹೇಗೆ? ಹೋಗಲಿ, ಹೋಗುವವರು ಒಂದು ಮಾತು ತಿಳಿಸಿ ಹೋಗ ಬಹುದಿತ್ತಲ್ಲ, ಮುಕ್ತಿ ಮಾರ್ಗವನ್ನು ಹುಡುಕಿಕೊಂಡು ಹೊರಟವರಿಗೆ ಹೇಳಿ ಹೋಗಿದ್ದರೆ ಮಾರ್ಗದ ಮುಳ್ಳಾಗುತ್ತಿದೆನೆಂದು ಭಾವಿಸಿದಿರಾ? ಧರ್ಮದಿಂದ ಸತಿ ಎಂದು ಒಪ್ಪಿಕೊಂಡವರಿಗೆ ಸತಿ ಧರ್ಮ ಪಾಲಿಸುವವಳಲ್ಲ ಎಂಬ ಅನುಮಾನ ಬಂದದ್ದಾರೂ ಹೇಗೆ? ಏಳು ವರ್ಷಗಳ ನಂತರ ಬಂದ ನಿಮ್ಮನ್ನು ನಿಷ್ಠುರ ನುಡಿಗಳಿಂದ ನುಡಿಯುತ್ತಿದ್ದೇನೆ ಎನಿಸುತ್ತಿದೆಯಲ್ಲವೇ ಎಂದದ್ದಕ್ಕೆ–

ಇಂದೆನಗೆ ನೀವು ಈ ಸತ್ಕಾರ ಮಾಡಿರುವುದಕ್ಕೆ ಹೆಮ್ಮೆ ಎನಿಸುತ್ತಿದೆ. ನನ್ನ ಮುಖದಲ್ಲಿ ಕಾಠಿಣ್ಯವನ್ನು ಗುರುತಿಸಬಲ್ಲಿರಾ? ಸಮಚಿತ್ತನಾದ ನನಗೆ ನೀವು ಅಂದುದೆಲ್ಲವೂ ನನ್ನ ಮನಸಿನ ಗೋಡೆಗೆ ಕಟ್ಟಿದ ರಕ್ಷಾ ಕವಚಗಳೆಂದೇ ಭಾವಿಸಿದ್ದೇನೆ.

ನಾನು ಹೊರಟು ಹೋದ ನಂತರವೂ ನೀವು ತಾಳ್ಮೆಯಿಂದ ಕಾಯ್ದಿದ್ದು,